**ಬಿಡುಗಡೆಗೆ ಶಿಫಾರಸ್ಸು ಮಾಡಲಾದ ನೂತನ ತಳಿಗಳು (3)**

2025–26ರಲ್ಲಿ ರಾಗಿ ಮತ್ತು ಬೀಜದ ದಂಟಿನ ಬೆಳೆಯಲ್ಲಿ ತಲಾ ಒಂದರಂತೆ 2 ಅಧಿಕ ಇಳುವರಿ ನೀಡುವ ತಳಿ ಹಾಗೂ ಮುಸುಕಿನ ಜೋಳದ ಬೆಳೆಯಲ್ಲಿ 1 ಸಂಕರಣ ತಳಿಯನ್ನು ವಲಯ–5ರ ರೈತ ಸಮುದಾಯ ಹಾಗೂ ಇತರೆ ಪಾಲುದಾರರಿಗೋಸ್ಕರ ಬಿಡುಗಡೆ ಮಾಡಲಾಗಿದೆ.

- **ರಾಗಿ ತಳಿ ಜಿಪಿಯು–101:** ಈ ತಳಿಯು ಮುಂಗಾರು–ನೀರಾವರಿ ಮತ್ತು ಮಳೆಯಾಶ್ರಿತ (ಜುಲೈ–ಅಗಸ್ಟ್) ಪ್ರದೇಶಗಳಿಗೆ ಸೂಕ್ತವಾಗಿದೆ. ಮಧ್ಯಮಾವಧಿ ತಳಿಯಾಗಿದ್ದು ಸುಮಾರು 110–115 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಹೆಕ್ಟೇರಿಗೆ 37–40 ಕ್ವಿಂಟಾಲ್ ಧಾನ್ಯದ ಇಳುವರಿ ಮತ್ತು 6.5 ಟನ್ ಮೇವಿನ ಇಳುವರಿ ನೀಡುವ ಸಾಮರ್ಥ್ಯ ಹೊಂದಿದೆ. ಮಧ್ಯಮ ಸಸ್ಯ ಎತ್ತರವನ್ನು (108 ಸೆಂ.ಮೀ.) ಹೊಂದಿದ್ದು, ಬಾಗುವಿಕೆಗೆ ಪ್ರತಿರೋಧ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ. ಇಲುಕು ಮತ್ತು ಕುತ್ತಿಗೆ ಬೆಂಕಿರೋಗಕ್ಕೆ ನಿರೋಧಕತೆ ಹೊಂದಿದೆ. ರಾಗಿ ಹಿಟ್ಟು ಮತ್ತು ಮುದ್ದೆಯು ಶ್ರೇಷ್ಟ ಗುಣಮಟ್ಟವನ್ನು ಹೊಂದಿರುತ್ತದೆ.
- **ಮುಸುಕಿನ ಜೋಳದ ಸಂಕರಣ ತಳಿ ಎಂಎಹೆಚ್–20–45:** ಈ ಸಂಕರಣ ತಳಿಯು ಸರಾಸರಿ 110.6 ಕ್ವಿಂ/ಹೆ ಧಾನ್ಯ ಇಳುವರಿಯನ್ನು ದಾಖಲಿಸಿದ್ದು, ಹೋಲಿಕೆ ತಳಿ ಎಂಎಹೆಚ್–14–5 (96.6 ಕ್ವಿಂ/ಹೆ) ತಳಿಗಿಂತ ಶೇ.14.6 ಹೆಚ್ಚುವರಿ ಇಳುವರಿಯನ್ನು ನೀಡಿದೆ. ಈ ಸಂಕರಣ ತಳಿಯನ್ನು ಮುಂಗಾರಿನಲ್ಲಿ ಬೆಳೆಯಬಹುದಾಗಿದ್ದು, ಟರ್ಸಿಕಮ್ ಎಲೆ ಅಂಗಮಾರಿ ರೋಗಕ್ಕೆ ಸಹಿಷ್ಣುತೆಯನ್ನು ಹಾಗೂ ಕೇದಿಗೆ ರೋಗಕ್ಕೆ ಮಧ್ಯಮ ಮಟ್ಟದ ಸಹಿಷ್ಣುತೆಯನ್ನು ಹೊಂದಿದೆ. ಗಟ್ಟಿಯಾದ ಹಾಗೂ ಬಲಿಷ್ಠ ಕಾಂಡ, ಅಗಲ ಮತ್ತು ದಪ್ಪ ಎಲೆಗಳ ಹೊಂದಾಣಿಕೆ ಇದರ ಪ್ರಮುಖ ವೈಶಿಷ್ಟ್ಯಗಳಾಗಿದ್ದು, ಹೆಚ್ಚಿನ ಜೈವಿಕ ದ್ರವ್ಯರಾಶಿ ಉತ್ಪಾದನೆ ಹೊಂದಿರುವುದರಿಂದ ಧಾನ್ಯ ಹಾಗೂ ಮೇವು ಎರಡಕ್ಕೂ ಅತ್ಯಂತ ಸೂಕ್ತವಾಗಿದೆ.
- **ಬೀಜದ ದಂಟಿನ ತಳಿ ಕೆಬಿಜಿಎ–18:** ಆರಂಭಿಕ ಮತ್ತು ತಡಮುಂಗಾರಿಗೆ ಸೂಕ್ತ ತಳಿ ಆಗಿದ್ದು, ಹೆಚ್ಚಿನ ಇಳುವರಿಯನ್ನು (22–24 ಕ್ವಿಂ/ಹೆ) ನೀಡುತ್ತದೆ. ಸಧೃಡ ಕಾಂಡ ಹೊಂದಿರುವುದರಿಂದ ಬಾಗುವಿಕೆಗೆ ನಿರೋಧಕತೆಯನ್ನು ಹೊಂದಿದೆ. ಹಳದಿ ಮತ್ತು ಹಸಿರು ಬಣ್ಣದ ಕಾಂಡ ಮತ್ತು ಹಸಿರು ಬಣ್ಣದ ಹೂಗೊಂಚಲನ್ನು ಹೊಂದಿದೆ. ಎಲೆ ತುಕ್ಕು ಮತ್ತು ಎಲೆ ಚುಕ್ಕೆ ರೋಗಕ್ಕೆ ಹಾಗೂ ಪ್ರಮುಖ ಕೀಟಗಳಿಗೆ ನಿರೋಧಕ ಶಕ್ತಿ ಹೊಂದಿದೆ.